# ಮೊಹರಾ ಬಾಯಿ

ಡಾ. ಶೈಲಜಾ ಆಮೂರ

ಸ್ವಾಮಿ ವಿವೇಕಾನಂದರ ಸಂಪರ್ಕಕ್ಕೆ ಪರೋಕ್ಷವಾಗಿಯೋ, ಅಪರೋಕ್ಷವಾಗಿಯೋ ಬಂದಿದ್ದ ಎಷ್ಟೋ ಜನರ ಬದುಕು ಸುಂದರವಾಗಿ, ಸತ್ತ್ವಶಾಲಿಯಾಗಿ ಮಾರ್ಪಟ್ಟು ಪರಮ ಪ್ರಶಾಂತಿಯ ರಾಜಮಾರ್ಗಗಳಾಗಿ ರೂಪುಗೊಂಡು, ಇತರರಿಗೂ ಆದರ್ಶವಾಗಿವೆ. ಹಲವರು ಅವರ ಸ್ಫೂರ್ತಿದಾಯಕ ನುಡಿಗಳಿಂದ ಪ್ರಭಾವಿತರಾದರೆ ಮತ್ತೆ ಕೆಲವರು ಅವರ ಸಹಾನುಭೂತಿಯ ಸ್ವಭಾವಕ್ಕೆ ಸೋತಿದ್ದರು. ಒಟ್ಟಾರೆ ಸ್ವಾಮಿ ವಿವೇಕಾನಂದರ ಆಕರ್ಷಕ ವ್ಯಕ್ತಿತ್ವದ ಸಂಪರ್ಕಕ್ಕೆ ಬಂದ ಅಗಣಿತ ಜನ ತಮ್ಮ ಬದುಕನ್ನು ಸಾರ್ಥಕವಾಗಿಸಿಕೊಂಡಿದ್ದಾರೆ.

ಹಿಂದೂ ತತ್ತ್ವಶಾಸ್ತ್ರದ ಪ್ರಕಾರ, ಮಹಾತ್ಮರು ಸ್ಪರ್ಶಮಾತ್ರದಿಂದ ವ್ಯಕ್ತಿಯ ವಿಚಾರಧಾರೆಯನ್ನು ಅಥವಾ ಭಾವನೆಗಳನ್ನು ಉದಾತ್ತೀಕರಿಸುವ ಶಕ್ತಿಯನ್ನು ಹೊಂದಿದವರಾಗಿರುತ್ತಾರೆ. ಶ್ರೀರಾಮನ ಪಾದಸ್ಪರ್ಶದಿಂದ ಮಹಿಳೆ ಶಬರಿಯ ಬದುಕು ಸಫಲಗೊಂಡಂತೆ, ಶ್ರೀಕೃಷ್ಣನ ಹಸ್ತ ಸ್ಪರ್ಶದಿಂದ ಸುದಾಮನ ಬದುಕು ಸಾಫಲ್ಯವನ್ನು ಪಡೆದಿತ್ತು. ಇಂತಹದೇ ಒಂದು ಘಟನೆ ಸ್ವಾಮಿ ವಿವೇಕಾನಂದರ ಸಾನ್ನಿಧ್ಯಲಾಭ ಪಡೆದಿದ್ದ ಮೊಹರಾಬಾಯಿಯ ಜೀವನವನ್ನೇ ಪರಿವರ್ತಿಸಿತ್ತು. ಇದರ ಬಗ್ಗೆ ಶ್ರೀಮಾತೆ ಶಾರದಾದೇವಿಯವರಿಂದ ಮಂತ್ರದೀಕ್ಷೆ ಹಾಗೂ ಸ್ವಾಮಿ ಬ್ರಹ್ಮಾನಂದರಿಂದ ಸಂನ್ಯಾಸದೀಕ್ಷೆ ಪಡೆದಿದ್ದ ಸ್ವಾಮಿ ಜಪಾನಂದರು ಉಲ್ಲೇಖಿಸಿದ್ದಾರೆ. ಇದನ್ನು ನಂದಿತಾ ಭಾರ್ಗವ ಅವರು ತಮ್ಮ ಲೇಖನದಲ್ಲಿ ಬರೆದಿದ್ದಾರೆ.

ರಾಜಸ್ಥಾನದ ಬುಂದಿ ಘಟ್ಟದ ರಾಣಿ ಮೊಹರಾ ಬಾಯಿ ಮೂಲತಃ ಗುಜರಾತಿನವಳಾಗಿದ್ದಳು. ಯಾವಾಗ ಮೊಹರಾ ಬಾಯಿ ಮೂರು ವರ್ಷದ ಬಾಲಕಿಯಾಗಿದ್ದಳೋ ಆಗ ಅವಳಿಗೆ ಸ್ವಾಮಿ ವಿವೇಕಾನಂದರ ತೊಡೆಯ ಮೇಲೆ ಕುಳಿತುಕೊಳ್ಳುವ ಸೌಭಾಗ್ಯ ಒದಗಿಬಂದಿತ್ತು !

ನಂದಿತಾ ಭಾರ್ಗವರು ಸ್ವಾಮಿ ಜಪಾನಂದರೊಂದಿಗೆ ಅಜಮೀರಕ್ಕೆ ಹೋದಾಗ, ಸ್ವಾಮಿ ವಿವೇಕಾನಂದರ ಸಾನ್ನಿಧ್ಯಲಾಭವನ್ನು ತನ್ನ ಬಾಲ್ಯದಲ್ಲಿಯೇ ಪಡೆದಿದ್ದ ರಾಣಿ ಮೊಹರಾ ಬಾಯಿಯನ್ನು ಕಾಣುವ ಸುಯೋಗ ಒದಗಿಬಂದಿತ್ತು. ಅವಳನ್ನು ಭೇಟಿಯಾಗುವ ಮೊದಲು ನಂದಿತಾ ಮೊಹರಾಬಾಯಿಯ ಬಗ್ಗೆ ಏನೇನನ್ನೋ ಕಲ್ಪಿಸಿಕೊಂಡಿದ್ದರೆಂಬುದನ್ನು ತಮ್ಮ ಲೇಖನದಲ್ಲಿ ಬರೆದಿದ್ದಾರೆ. ಅತ್ಯಂತ ಅಮೂಲ್ಯವಾದ ವಸ್ತ್ರದಿಂದ ತಯಾರಿಸಿದ ಸೀರೆಯನ್ನು ಧರಿಸಿರಬಹುದೇನೋ, ಸಕಲ ಆಭರಣಗಳಿಂದ ಅಲಂಕೃತರಾಗಿ ಹಲವಾರು ಮಂದಿ ಆಳುಗಳಿಂದ ಸೇವೆ ಮಾಡಿಸಿಕೊಳ್ಳುತ್ತಾ ಸುಂದರವಾದ ಅರಮನೆಯಲ್ಲಿ ವಾಸವಾಗಿದ್ದಾರೇನೋ ಎಂದೆಲ್ಲ ಕಲ್ಪಿಸಿಕೊಳ್ಳುತ್ತ ಅವರ ಮನೆಗೆ ಪ್ರವೇಶಿಸಿದ ನಂದಿತಾರಿಗೆ ಆಶ್ಚರ್ಯವೇ ಕಾದಿತ್ತು!

ರಾಣಿ ಮೊಹರಾಬಾಯಿ ಒಂದು ಸಾಧಾರಣವಾದ ಬಿಳಿಯ ಸೀರೆಯನ್ನು ಧರಿಸಿದ್ದು ಅದಕ್ಕೆ ಒಂದು ಸಣ್ಣ ರೇಷ್ಮೆಯ ಅಂಚು ಇತ್ತು. ಅವಳು ಯಾವುದೇ ಬಗೆಯ ಆಭರಣವನ್ನೂ ಧರಿಸಿರಲಿಲ್ಲ, ಕೇವಲ ಒಬ್ಬರೋ ಅಥವಾ ಇಬ್ಬರು ಸಹಾಯಕ್ಕಾಗಿ ಇದ್ದರು. ಅವಳು ಸ್ವಾಮಿ ಜಪಾನಂದರನ್ನು ಆದರದಿಂದ ಬರಮಾಡಿಕೊಂಡಳು. ಅತಿಥಿಗಳಿಗೆ ಉಪಾಹಾರದ ವ್ಯವಸ್ಥೆ ಮಾಡಿದ್ದಳು. ಸ್ವಲ್ಪ ಸಮಯದ ನಂತರ ಅವರನ್ನು ಪೂಜಾಗೃಹಕ್ಕೆ ಕರೆದೊಯ್ದಳು. ಅವಳ ಪೂಜಾಗೃಹದಲ್ಲಿ ಸುಂದರವಾದ ಪುಷ್ಪಗಳಿಂದ ಅಲಂಕೃತವಾಗಿದ್ದ ಶ್ರೀರಾಮಕೃಷ್ಣರ, ಶ್ರೀಮಾತೆ ಶಾರದಾದೇವಿಯವರ ಹಾಗೂ ಶ್ರೀಮತ್ ಸ್ವಾಮಿ ವಿವೇಕಾನಂದರ ಭಾವಚಿತ್ರಗಳಿದ್ದವು. ನಂದಿತಾರಿಗೆ ರಾಣಿ ಮೊಹರಾ ಬಾಯಿಯನ್ನು ಕಾಣುವ ಅವಕಾಶ ಮತ್ತೊಮ್ಮೆ ಒದಗಿಬಂದಿತ್ತು. ಆ ವೇಳೆಗೆ ಅರಮನೆಯ ಮುಂದೆ ಸಾಲುಸಾಲಾಗಿ ನಿಂತಿದ್ದ ಭಿಕ್ಷುಕರು ಅವಳಿಗೆ ಕಾಣಿಸಿದರು. ಒಬ್ಬ ವ್ಯಕ್ತಿ ಪ್ರತಿಯೊಬ್ಬರಿಗೂ ಸಿಹಿತಿಂಡಿ ಹಾಗೂ ರೊಟ್ಟಿಗಳಿಂದ ಕೂಡಿದ್ದ ಪೊಟ್ಟಣವನ್ನು ನೀಡುತ್ತಿದ್ದನು. ಒಬ್ಬೊಬ್ಬರಾಗಿ ಬಂದು ಅದನ್ನು ಸ್ವೀಕರಿಸಿ ಹೊರಡುತ್ತಿದ್ದರು. ಸ್ವಾಮಿ ವಿವೇಕಾನಂದರ ಸಾನ್ನಿಧ್ಯ ಮೊಹರಾ ಬಾಯಿಯ ಮೇಲೆ ಅಗಾಧವಾದ ಪ್ರಭಾವ ಬೀರಿದ್ದನ್ನು ಪ್ರತ್ಯಕ್ಷದರ್ಶಿ ನಂದಿತಾ ಭಾರ್ಗವ ಗ್ರಹಿಸಿದರು !

ಗುಜರಾತಿನ ಹೆಣ್ಣುಮಗಳಾಗಿದ್ದ ಮೊಹರಾಬಾಯಿ ಮುಂದೆ ರಾಜಸ್ಥಾನದ ಬುಂದಿ ನಗರದ ರಾಣಿಯಾಗಿದ್ದಳು. ಅವಳ ಮಗ ಅಜಮೀರ್‌ನಲ್ಲಿ ಮೇಯೋ ಕಾಲೇಜಿನಲ್ಲಿ (Mayo College) ವ್ಯಾಸಂಗ ಮಾಡುತ್ತಿದ್ದ. ಮೇಲಿಂದ ಮೇಲೆ ಅವಳು ತನ್ನ ಮಗನನ್ನು ಕಾಣಲು ಅಜಮೀರ್‌ಗೆ ಬರುತ್ತಿದ್ದಳು. ನಂತರ ಅಜಮೀರ್‌ನಲ್ಲಿಯೇ ಒಂದು ಅರಮನೆಯನ್ನು ನಿರ್ಮಿಸಿ ಅಲ್ಲಿಯೇ ವಾಸಿಸತೊಡಗಿದಳು. ಸುಮಾರು ೧೯೫೦-೧೯೫೫ನೆಯ ಇಸವಿ ಅವಧಿಯಲ್ಲಿ ರಾಜಕೋಟ್‌ನ ಸ್ವಾಮಿ ಜಪಾನಂದರೊಂದಿಗೆ ರಾಣಿ ಮೊಹರಾ ಬಾಯಿಯನ್ನು ನೇರವಾಗಿ ಕಂಡು ಮಾತನಾಡಿಸುವ ಸುಯೋಗ ನಂದಿತಾ ಭಾರ್ಗವರಿಗೆ ಲಭಿಸಿತ್ತು. ಮೂರು ವರ್ಷದ ಬಾಲಕಿಯಾಗಿದ್ದಾಗ ಸಾಮಿ ವಿವೇಕಾನಂದರ ದಿವ್ಯ ಸ್ಪರ್ಶದ ಲಾಭ ಹೊಂದಿದ್ದ ಮೊಹರಾಬಾಯಿಯಲ್ಲಿ ಸತ್‌ಸಂಸ್ಕಾರಗಳು ಉದ್ದೀಪಗೊಂಡು, ಅವಳನ್ನು ಆತ್ಮೋನ್ನತಿಯ ಮಾರ್ಗದಲ್ಲಿ ಬದುಕು ಸಾಗಿಸುವಂತೆ ಸದಾ ಪ್ರೇರೇಪಿಸಿದ್ದವು! ❁

*(ಗ್ರಂಥಋಣ : Indian Women in the Company of Swami Vivekananda, by Tarit Kumar Bandyopadhyay, 2023)*